ಕಥೆ

# ದೈವದತ್ತ



**ವಸಂತ ಕಲ್‌ಬಾಗಲ್**

ಕಲೆ: ವಿ.ಎಂ. ಮಂಜುನಾಥ್

ತಾತ ಆಶ್ರಮದವರಿಗೆ ಹೇಳಿದ್ದು ನನ್ನ ಕಿವಿಗೂ ಬಿತ್ತು

‘ಹೌದು, ಕುಟುಂಬದೊಂದಿಗೇ ಬಂದಿದ್ದೇನೆ. ಇವನು ನನ್ನ ಮೊಮ್ಮಗ, ಹಾಗಂತ ಬರೆದುಕೊಳ್ಳಿ ಸ್ವಾಮೀ. ಇವನೇ ನನ್ನ ತಾಯಿ, ತಂದೆ, ಪತ್ನಿ, ಪುತ್ರ, ಬಂಧು, ನೆಂಟ ಎಲ್ಲಾ’ ಎಂದರು. ಆಶ್ರಮದ ಮೇಲ್ವಿಚಾರಕರು, ‘ಹೆಸರು, ವಿಳಾಸ, ಸಂಪರ್ಕ ಮಾಡುವ ಫೋನ್ ನಂಬರ್ ಎಲ್ಲಾ ಕೊಡಿ. ಇಲ್ಲಿಗೆ ಬರುವಾಗ ಕುಟುಂಬದ ಸದಸ್ಯರು ಜೊತೆಗಿರಬೇಕು’ ಎಂದರು.

ಬಿಬಿಎಂ ಓದಿದ ನನಗೆ ಕೆಲಸ ಸಿಗುವುದು ಸುಲಭವಲ್ಲ. ನಮ್ಮ ತಂದೆ ಹಠಾತ್ತನೆ ಹೋದ ನಂತರ ಮನೆಯ ಖರ್ಚು ವೆಚ್ಚದ ಜವಾಬ್ದಾರಿ ನನ್ನ ಮೇಲೆ ತಂತಾನಾಗಿ ಬಿದ್ದಿತು. ದೊಡ್ಡ ಹುದ್ದೆಯಲ್ಲಿ ಇರುವವರ ಪರಿಚಯವಿದ್ದರಷ್ಟೇ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಸಂದರ್ಶನಕ್ಕೆ ಕರೆಯುತ್ತಾರೆ ಎಂದು ಸಹಪಾಠಿಗಳಿಂದ ತಿಳಿದಾಗ, ನಾನು ಹತಾಶನಾದೆ. ನಮ್ಮ ರಸ್ತೆಯ ಹುಡುಗನೊಬ್ಬ ಪಿಯುಸಿ ಆದ ನಂತರ ‘ಪ್ಯಾರಾ ಮೆಡಿಕ್ ಕೋರ್ಸ್’ ಮಾಡಿಕೊಂಡು ಖಾಸಗಿ ಆಸ್ಪತ್ರೆಯಲ್ಲಿ ಸಿಬ್ಬಂದಿಯಾಗಿ ಸೇರಿಕೊಂಡು ಸಂಪಾದಿಸತೊಡಗಿದ್ದ. ನನಗೂ ತರಬೇತಿ ತೆಗೆದುಕೊಳ್ಳಲು ಸಹಾಯ ಮಾಡಿದ. ತರಬೇತಿಯೊಂದಿಗೇ ದೊಡ್ಡ ಖಾಸಗಿ ಆಸ್ಪತ್ರೆಯಲ್ಲಿ ‘ಪ್ಯಾರಾ ಮೆಡಿಕ್ ಸ್ಟಾಫ್’ ಆಗಿ ಕೆಲಸವೂ ಸಿಕ್ಕಿ ಒಂದು ಜೀವನೋಪಾಯವಾಯಿತು. ಹಾಗಾಗಿ ಐಸಿಯುನಲ್ಲಿ ಇದ್ದ ಒಬ್ಬ ತಾತನ ಒಡನಾಟವಾಯಿತು. ಅವರ ಆರೋಗ್ಯ ತಕ್ಕಮಟ್ಟಿಗೆ ಸುಧಾರಿಸುತ್ತಲೇ ಅವರ ಮನೆಯಲ್ಲೇ ಶುಶ್ರೂಷೆ ಮಾಡಲು ವಿದೇಶದಿಂದ ಬಂದ ಅವರ ಮಗ, ರಘು ಸರ್ ನನ್ನಲ್ಲಿ ಕೋರಿಕೊಂಡರು. ತಾನು ಸದ್ಯದಲ್ಲೇ ಮರಳಿ ಹೋಗಬೇಕೆಂದೂ, ತಾತನ ಸಂಪೂರ್ಣ ಜವಾಬ್ದಾರಿಯನ್ನು ನಾನೇ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡರು. ತಕ್ಕ ಸಂಬಳವನ್ನೂ ಮಾತನಾಡಿದರು. ಆಸ್ಪತ್ರೆಗಿಂತ ತುಸು ಹೆಚ್ಚೇ ಆದ್ದರಿಂದ, ನಾನು ಒಪ್ಪಿಕೊಂಡೆ. ಅಡುಗೆಗೆ ಒಬ್ಬಳು ಬಂದು ಅಡುಗೆ ಮಾಡಿರಿಸಿ ಹೋಗುತ್ತಿದ್ದಳು. ಇನ್ನು ಮನೆಗೆ ಬೇಕಾದ ಹಾಲು, ಹಣ್ಣು, ದಿನಸಿ, ಇತ್ಯಾದಿಗಳನ್ನು ಅಂತರ್ಜಾಲದ ಮೂಲಕ ಎರಡು ದಿನಕ್ಕೊಮ್ಮೆ ಬಂದು ಬೀಳುವಂತೆ ಮಾಡಿದ ರಘು ಸರ್ ಹೊರಟರು.

ನನ್ನ ದಿನಚರಿ ತಾತನನ್ನು ಮನೆಯಲ್ಲಿ ನಿಧಾನವಾಗಿ ನಡೆಸುವುದು, ವೀಲ್ ಚೇರ್‌ನಲ್ಲಿ ಪಾರ್ಕ್ ಸುತ್ತಿಸುವುದು, ಊಟ, ಸ್ನಾನ ಇತ್ಯಾದಿಗಳನ್ನು ಮಾಡಿಸುತ್ತಾ ಕಥೆಗಳನ್ನು ಕೇಳಿ-ಹೇಳಿ ನಗಿಸುವುದು, ಇಷ್ಟೇ. ಇಷ್ಟನ್ನೂ ಅಕ್ಕರೆಯಿಂದ ಮಾಡಿದರೆ, ಇನ್ನಷ್ಟು ಸೇರಿಸಿ ಸಂಬಳ ಕೊಡುತ್ತೇನೆ ಎಂದು ರಘು ಸರ್ ಹೇಳಿದರು. ಅವರಿಗೆ ನನ್ನ ಅಗತ್ಯ, ನನಗೆ ಅವರ ಹಣದ ಅಗತ್ಯವಿದ್ದುದರಿಂದ ನಮ್ಮ ನಡುವೆ ಈ ಒಪ್ಪಂದ ಒಗ್ಗಿತು. ತಾತನಿಗೆ ನಿತ್ರಾಣವಿದ್ದರೂ ಕಣ್ಣಲ್ಲಿ ಹೊಳಪು, ಬುದ್ಧಿ ಚುರುಕು. ನಾನು ಬಿಬಿಎಂ ಪದವಿ